KATK010039232023

## <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>

## <u>ವಿಶೇಷ ಮೊಕದ್ದಮೆ ಸಂಖ್ಯೆ.474/2023</u>

ಪ್ರಾ.ಸಾ. ಃ **13**

ದೋ.ಸಾ. ಃ **16**

ದಿ.**05.08.2026.**

ಹೆಸರು ಃ ಧನರಾಜ್

ತಂದೆಯ ಹೆಸರು ಃ ವಿಜಯ ನಾಯಕ

ವಯಸ್ಸು ಃ **15** ವರ್ಷ

ಉದ್ಯೋಗ ಃ **9** ನೇ ತರಗತಿಯ ವಿದ್ಯಾರ್ಥಿ

ವಾಸಸ್ಥಳ ಃ ಹಳ್ಳಿಗೇರಿ ಕೋಡಿ ತಾಂಡ್ಯ

ಪ್ರಶ್ನೆ ಃ ನಿನ್ನ ಹೆಸರೇನು **?**

ಉತ್ತರ ಃ ಧನರಾಜ್

ಪ್ರಶ್ನೆ ಃ ಯಾವ ತರಗತಿಯಲ್ಲಿ ಓದುತ್ತಿದ್ದೀಯಾ **?**

ಉತ್ತರ ಃ **9** ನೇ ತರಗತಿ

ಪ್ರಶ್ನೆ ಃ ನಿನ್ನ ಶಾಲೆಯ ಹೆಸರೇನು **?**

ಉತ್ತರ ಃ ಶ್ರೀ ರಂಗನಾಥ ಪ್ರೌಢಶಾಲೆ, ಆಲೂಗಟ್ಟಿ

ಪ್ರಶ್ನೆ ಃ ನೀನು ಎಲ್ಲಿಗೆ ಬಂದಿದ್ದೀಯಾ **?**

ಉತ್ತರ ಃ ಕೋರ್ಟಿಗೆ ಬಂದಿದ್ದೇನೆ.

ಪ್ರಶ್ನೆ ಃ ಕೋರ್ಟಿನಲ್ಲಿ ಸತ್ಯ ಹೇಳಬೇಕೋ, ಸುಳ್ಳು ಹೇಳಬೇಕೋ **?**

ಉತ್ತರ ಃ ಸತ್ಯ

ಪ್ರಶ್ನೆ ಃ ಸುಳ್ಳು ಹೇಳಿದರೆ ಏನಾಗುತ್ತದೆ **?**

ಉತ್ತರ ಃ ಸುಳ್ಳು ಹೇಳಬಾರದು, ಸತ್ಯವನ್ನೇ ಹೇಳಬೇಕು

ಪ್ರಶ್ನೆ ಃ ಕೋರ್ಟಿಗೆ ಏತಕ್ಕೆ ಬಂದಿದ್ದೀಯಾ **?**

ಉತ್ತರ : ನಿಜ ಹೇಳಲು

ಮೇಲಿನ ಪ್ರಶ್ನೆಗಳಿಂದ ಈ ಸಾಕ್ಷಿಗೆ ಹಾಕಲಾದ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಉತ್ತರವನ್ನು ನೀಡುವ ಸಾಮರ್ಥ್ಯವಿದೆ ಎಂದು ಕಂಡುಬರುತ್ತಿದ್ದು, ಅದರಂತೆ ಸಾಕ್ಷಿಗೆ ಸತ್ಯಪ್ರತಿಜ್ಞೆಯ ಪ್ರಮಾಣವಚನವನ್ನು ಬೋಧಿಸಬಹುದೆಂಬ ಅಭಿಪ್ರಾಯಕ್ಕೆ ಬರುತ್ತಾ ಸಾಕ್ಷಿಗೆ ಸತ್ಯಪ್ರತಿಜ್ಞೆಯ ಪ್ರಮಾಣವಚನವನ್ನು ಬೋಧಿಸಲಾಯಿತು

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ನಾನು ಮಲ್ಲಸಂದ್ರದ ಶ್ರೀ ವಿಶ್ವಭಾರತಿ ಶಾಲೆಯಲ್ಲಿ 5 ನೇ ತರಗತಿಯನ್ನು ಓದುತ್ತಿದ್ದೆನು. ಅದೇ ಶಾಲೆಯ ಹಾಸ್ಟೆಲ್ ನಲ್ಲಿ ನಾನು ಉಳಿದುಕೊಂಡಿದ್ದೆನು. ಆರೋಪಿ ಗೊತ್ತಿದೆ. ಆರೋಪಿ ನಮ್ಮ ಹಾಸ್ಟೆಲ್ ಗೆ ಬರುತ್ತಿದ್ದರು. ಆರೋಪಿ ನಮ್ಮ ಶಾಲೆಯ ಮಾಲೀಕರ ಮಗ. ನಮ್ಮ ಶಾಲೆಯ ಮಲ್ಲಮ್ಮ ಟೀಚರ್ ಗೊತ್ತಿದೆ. ಆರೋಪಿ ನನಗಾಗಲೀ, ನನ್ನ ಸ್ನೇಹಿತರಿಗಾಗಲೀ ಏನೂ ಮಾಡಿಲ್ಲ. ನನಗೇನೂ ಏಟಾಗಿಲ್ಲ. ಆರೋಪಿ ತಪ್ಪು ಮಾಡಬೇಡಿ, ಓದಿಕೊಳ್ಳಿ ಎಂದು ಹೇಳುತ್ತಿದ್ದರು. ಆರೋಪಿ ಎಡಮಟ್ಟೆ ಮತ್ತು ಬೆಲ್ಟ್ ನಿಂದ ಹೊಡೆದಿದ್ದರು ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು/ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

2. ದಿ.21.11.2022 ರಂದು ರಾತ್ರಿ 9.00 ಗಂಟೆಗೆ ಮಲ್ಲಮ್ಮ ಮಿಸ್ ಹಾಸ್ಟೆಲ್ ನಲ್ಲಿದ್ದ ನಮಗೆ ಊಟ ಹಾಕಿಸಿ ಮನೆಗೆ ಹೋದರು ಎಂದರೆ ಸರಿಯಲ್ಲ. ನಾವು ಮಲಗಿಕೊಂಡಿದ್ದಾಗ ಆರೋಪಿ ರಾತ್ರಿ 10.30 ಗಂಟೆಗೆ ಬಂದು ನಮ್ಮ ಎಲ್ಲರನ್ನೂ

ಎಬ್ಬಿಸಿ ಸಾಲಾಗಿ ನಿಲ್ಲಿಸಿ, ಯಾಕ್ರೋ ಇಷ್ಟು ಬೇಗ ಮಲಗಿದ್ದೀರಾ, ನಾನು ಹೇಳಿದ ಮೇಲೆ ನೀವೆಲ್ಲಾ ಮಲಗಬೇಕು ಎಂದು ಹೇಳಿ, ಎಲ್ಲರಿಗೂ ತೆಂಗಿನ ಎಡಮಟ್ಟೆಯಿಂದ, ಬೆಲ್ಟ್ ನಿಂದ ಹೊಡೆದರು, ನನ್ನ ಬಲಭಾಗದ ಎದೆಗೆ ಪೆಟ್ಟು ಬಿದ್ದಿತು ಮತ್ತು ಆ ದಿನ 16 ಮಕ್ಕಳಿಗೆ ಜಾಸ್ತಿ ಪೆಟ್ಟುಗಳು ಬಿದ್ದಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ43 ಎಂದು ಗುರುತಿಸಲಾಯಿತು. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಆರೋಪಿಯನ್ನು ಬಚಾವು ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ.ಎಂ.ಸಿ.ಚಂದ್ರಯ್ಯ, ವಕೀಲರಿಂದ ಆರೋಪಿತರ ಪರವಾಗಿ :</u>**

ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ**.**

ಸಹಿ**/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು